ಸಿ.ಸಿ..ನಂ.1–24

ಪಿ.ಡಬ್ಲ್ಯೂ–2

ದಿನಾಂಕ.01–08–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎಸ್ ಆರ್ ಎನ್ ವಕೀಲರಿಂದಃ

1. ಸರಕಾರಕ್ಕೆ ಪಂಚನಾಮೆಯನ್ನು ಬರೆದುಕೊಡಬೇಕು ಎಂದು ಯಾರು ನಿಮಗೆ ಹೇಳಿದ್ದು ಎಂದರೆ ಅದು ರೂಢಿಗತವಾಗಿ ನಾವು ಬರೆಯುತ್ತೇವೆ. ನಿಮ್ಮ ಪ್ರಕಾರ ಇದನ್ನು ಬರೆಯುವಾಗ ಯಾವ ಸರಕಾರಕ್ಕೆ ಬರೆದಿರುತ್ತೀರಿ ಎಂದರೆ ಕರ್ನಾಟಕ ಸರಕಾರಕ್ಕೆ ಬರೆದಿರುತ್ತೇವೆ. ಸದ್ರಿ ಮಹಜರವನ್ನು ಕರ್ನಾಟಕ ಸರಕಾರಕ್ಕೆ ನೀವು ಕಳುಹಿಸಿಕೊಟ್ಟಿರುತ್ತೀರಾ ಎಂದರೆ ಅದನ್ನು ನಾವು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇವೆ . ಸದ್ರಿ ಮಹಜರವನ್ನು ಇದೇ ರೀತಿಯಾಗಿ ಬರೆಯಬೇಕು ಎಂದು ಯಾರು ನಿಮಗೆ ಹೇಳಿರುತ್ತಾರೆ ಎಂದರೆ ಪಂಚರು ಹೇಳಿದ ಪ್ರಕಾರ ಬರೆದಿರುತ್ತೇವೆ . ಸದ್ರಿ ಮಹಜರವನ್ನು ಯಾವಾಗ ಬರೆದಿದ್ದು ಎಲ್ಲಿಂದ ಎಲ್ಲಿಯವರೆಗಿನ ಸಮಯದವರೆಗೆ ಬರೆಯಲಾಯಿತು ಎಂದು ಬರೆದಿರುತ್ತೀರಾ ಎಂದರೆ ಇಲ್ಲ. ಯಾವುದೇ ಪಂಚನಾಮೆಯನ್ನು ಬರೆಯುವುದಾದರೆ ಎಷ್ಟು ಗಂಟೆಯಿಂದ ಪಂಚನಾಮೆಯನ್ನು ಪ್ರಾರಂಭಿಸಿ ಎಷ್ಟು ಗಂಟೆಯ ವರೆಗೆ ಮುಗಿಸಲಾಯಿತು ಎಂದು ಬರೆಯಬೇಕು ಎಂದರೆ ಸರಿ. ಈ ರೀತಿಯಾಗಿ ಪಂಚನಾಮೆಯನ್ನು ಬರೆದಿದ್ದು ಅದನ್ನು ಮನೆಯಲ್ಲಿ ಕುವಿತುಕೊಂಡು ಬರೆಯಬಹುದು ಎಂದರೆ ಸರಿಯಲ್ಲ. ಇದನ್ನು ಸೃಷ್ಟಿ ಮಾಡಿಕೊಂಡು ಮನೆಯಲ್ಲಿ ಕುಳಿತುಕೊಂಡು ಬರೆಯಲು ಸಾಧ್ಯ ಇಲ್ಲವಾ ಎಂದರೆ ಸಾಧ್ಯ ಇರಬಹುದು. ನಾನು ಸ್ಥಳಕ್ಕೆ ಹೋದೆ ಎಂದು ಹೇಳಿದಂತೆ ನಾನು ಸ್ಥಳಕ್ಕೆ ಬರಿಗೈಯಲ್ಲಿ ಹೋಗಿದ್ದೆ. ನನ್ನ ಸಿಬ್ಬಂದಿಗಳು ಸ್ಥಳಕ್ಕೆ ಬರುವಾಗ ಏನೆಲ್ಲಾ ತಂದಿದ್ದರು ಎಂದು ನನಗೆ ನೆನಪಿಲ್ಲ. ನನ್ನ ಪ್ರಕಾರ ಪೆನ್ನು , ಪೇಪರವನ್ನು ಯಾರು ಎಲ್ಲಿಂದ ತಂದಿರುತ್ತಾರೆ ಎಂದು ನನಗೆ ನೆನಪಿಲ್ಲ. ಆ ಸಮಯದಲ್ಲಿ ಅಕ್ಕಪಕ್ಕದ ಅಂಗಡಿಗಳು ಓಪನ ವಾಗಿರಲಿಲ್ಲ. ಯಾವುದೇ ಪ್ರಾಣಿಯ ಮಾಂಸವನ್ನು ನಿಮ್ಮ ಕೈಯಲ್ಲಿ ಕೊಟ್ಟರೆ ಅದು ಇಂತಹದ್ದೆ ಪ್ರಾಣಿಯದ್ದು ಎಂದು ಹೇಳುವಂತಹ ವಿಶೇಷ ಜ್ಞಾನ ನಿಮಗೆ ಇರುತ್ತದೆಯಾ ಎಂದರೆ ಇಲ್ಲ.

**2**. ನಾನು ಹೇಳವಂತಹ ಸ್ಥಳವನ್ನು ಆಗ ನಾನು ಅಂದಾಜು 2-30 ರಿಂದ 2-45 ರ ಸಮಯದಲ್ಲಿ ಹೋಗಿರುತ್ತೇನೆ. ಈ ರೀತಿಯಾದ ಹೇಳಿಕೆಯನ್ನು ನಿಮ್ಮ ಹೇಳಿಕೆಯಲ್ಲಿ ಹೇಳಿರುತ್ತಿರಾ ಎಂದರೆ ಹೌದು.ನೀವು ಹೇಳುವಂತಹ ಕೃತ್ಯ ನಡೆಯಿತು ಎಂದು ಹೇಳಲಾದ ಸ್ಥಳ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಒಂದು ಹಳ್ಳಿಯ ಪ್ರದೇಶ ಎಂದರೆ ಸರಿ .ಆ ರಸ್ತೆಯ ಎರಡು ಬದಿಗಳಲ್ಲಿ ವಾಸ್ತವ್ಯದ ಮನೆಗಳು ಹಾಗೂ ಚರ್ಚ ಗಳು ಇರುತ್ತವೆ ಎಂದರೆ ಹೌದು . ನಿಮ್ಮ ಕ್ವಾರ್ಟಸ ಸಹ ಅದೇ ಪ್ರದೇಶಕ್ಕೆ ಹೊಂದು ಕೊಂಡು ಇರುತ್ತದೆ ಎಂದರೆ ಸರಿ . ನಾನು ಈ ಘಟನೆ ನಡೆಯಿತು ಎನ್ನಲಾದ ದಿನಾಂಕದ 2 ವರ್ಷಗಳ ಹಿಂದಿನಿಂದಲೂ ಅದೇ ಕ್ವಾರ್ಟಸ ನಲ್ಲಿ ವಾಸ ವಾಗಿರುತ್ತೇನೆ . ಹಾಗಾದರೆ ನಿಮಗೆ ನಿಮ್ಮ ಕ್ವಾರ್ಟಕ ಅಕ್ಕಪಕ್ಕ ದವರ ಹಾಗೂ ಘಟನೆ ನಡೆಯಿತು ಎನ್ನಲಾದ ಸ್ಥಳದ ಅಕ್ಕಪಕ್ಕದವರ ಪರಿಚಯ ಇರುತ್ತದೆ ಎಂದರೆ ಸರಿ . ಈ ಪ್ರಕರಣದಲ್ಲಿ ಕಾಣಿಸಲಾದ ಚಾಸಾ-3 ಮತ್ತು 4 ರವರು ನಿಮ್ಮ ಇಲಾಖೆಯಲ್ಲಿ ದಿನಗೂಲಿ ನೌಕರರಾಗಿ ಇರುವವರು ಎಂದರೆ ಸರಿ . ಸದ್ರಿಯವರು ನೀವು ವಾಸ ಮಾಡುತ್ತಿರುವ ಪ್ರದೇಶದವರಲ್ಲ ಎಂದರೆ ಸರಿ . ಸದ್ರಿ ಚಾಸಾ -3 ಮತ್ತು 4 ರವನ್ನು ನಾನೆ ಕರೆದುಕೊಂಡು ಬಂದಿರುತ್ತೇನೆ . ಅವರನ್ನು ಹೇಗೆ ಕರೆದುಕೊಂಡು ಬಂದೆ ಎಂದು ನನಗೆ ನೆನಪಿಲ್ಲ. ಸದ್ರಿ ಚಾಸಾ-3 ಮತ್ತು 4 ರವರ ಮನೆ ಆ ಪ್ರದೇಶದಿಂದ ಒಂದುವರೆ ಕಿ.ಮೀ ದೂರ ಇರುತ್ತದೆ ಎಂದರೆ ನನಗೆ ನಿಖರವಾಗಿ ಕೃತ್ಯ ನಡೆಯಿತು ಎನ್ನಲಾದ ಸ್ಥಳದಿಂದ ಎಷ್ಟು ದೂರದಲ್ಲಿದೆ ಎಂದು ನೆನಪಿಲ್ಲ. ಚಾಸಾ -3 ಮತ್ತು 4 ರವರು ಅಕ್ಷರಸ್ಥರಾ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸದ್ರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಕಷ್ಟು ವಾಹನಗಳು ನಿಲ್ಲುತ್ತವೆ ಎಕೆಂದರೆ ಆ ಸ್ಥಳದಲ್ಲಿ ಒಂದು ಕಡೆ ತಗ್ಗು ಪ್ರದೇಶವಿರುತ್ತದೆ ಎಂದರೆ ಸರಿ . ಸದ್ರಿ ಮಹಜರದಲ್ಲಿ ಕಾಣಿಸಲಾದ ನಾರಾಯಣ ಶೇಟ ರವರ ಪರಿಚಯ ನನಗೆ ಇರುತ್ತದೆ . ಅವರನ್ನು ಪಂಚರನ್ನಾಗಿ ಬರಬೇಕು ಎಂದು ಕರೆಯಲು ತೊಂದರೆ ಇತ್ತಾ ಎಂದರೆ ಆರೋಪಿ ಮಹೇಶ ಶೇಟ ರವರು ನಾರಾಯಣ ಶೇಟ ರವರ ಮಗನಾಗಿರುತ್ತಾನೆ . ಹಾಗಾಗಿ ನಾರಾಯಣ ಶೇಟರವನ್ನು ಪಂಚನಾಮೆಗೆ ಕರೆಯಲಿಲ್ಲ . ನಾರಾಯಣ ಶೇಟ ರವರ ಮನೆಗೆ ನಾನಾಗಲಿ ನನ್ನ ಸಿಬ್ಬಂದಿಯಾಗಲಿ ಭೇಟಿ ಮಾಡಿಲ್ಲ. ನಾರಾಯಣ ಶೇಟ ರವರ ಮನೆಗೆ ಹೋಗಿ ಯಾವುದಾದರೂ ಮಾಂಸ ವನ್ನು ಅವರ ಮನೆಯಲ್ಲಿ ಬೇಯಿಸಿರುತ್ತೀರಾ ಎಂದು ಪರಿಶಿಲಿಸಲು ತೊಂದರೆ ಇತ್ತಾ ಎಂದರೆ ಇಲ್ಲ.

3. FOC ಎಂದರೆ ಏನು ಎಂದರೆ ನನಗೆ ಗೊತ್ತಿಲ್ಲ. ಕಾಡು ಕುರಿದೇ ಮಾಂಸ ಎಂದು ನಿಮಗೆ ಗುರುತಿಸಲು ಬರುತ್ತದಾ ಎಂದರೆ ಅಲ್ಲಿದ್ದ ಆರೋಪಿಗಳೆ ಅದು ಕಾಡು ಕುರಿಯ ಮಾಂಸ ಎಂದು ಹೇಳುತ್ತಿದ್ದರು. ಆದರೆ ನನಗೆ ವೈಯಕ್ತಿಕವಾಗಿ ಯಾವ ಪ್ರಾಣಿಯ ಮಾಂಸ ಎಂದು ಪತ್ತೆ ಹಚ್ಚಲು ಬರುವುದಿಲ್ಲ . ಪ್ರಯೋಗಾಲಯದಿಂದ ವರದಿ ಬಂದ ಮೇಲೆ ಅದು ಯಾವ ಪ್ರಾಣಿಯ ಮಾಂಸ ಎಂದು ಗೊತ್ತಾಗುತ್ತದೆ .

4. ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಪೊಟೊಗಳನ್ನು ಯಾರು ತೆಗೆದದ್ದು ಎಂದು ನನಗೆ ನೆನಪಿಲ್ಲ. ನಾನು ಪೊಟೊ ತೆಗೆಯುವುದನ್ನು ನೋಡಿದ್ದೇನೆ . ಆದರೆ ಆ ಪೊಟೊ ಯಾರು ತೆಗೆದರು ಎಂದು ನನಗೆ ಈಗ ನೆನಪಿಗೆ ಬರುತ್ತಿಲ್ಲ. ಪೊಟೊ ತೆಗೆಯಲು ಪ್ರತ್ಯೇಕವಾದ ಸಿಬ್ಬಂದಿಗಳು ಇರುವುದಿಲ್ಲ . ಪೊಟೊ ತೆಗಯಲು ನಮ್ಮ ಕಚೇರಿಯಲ್ಲಿ ಕ್ಯಾಮೆರಾ ಇರಲಿಲ್ಲ . ಸದ್ರಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ಪೊಟೊಗಳ ನೆಗೆಟಿವ್ ಗಳು ಎಲ್ಲಿರುತ್ತದೆ ಎಂದು ನನಗೆ ನೆನಪಿಲ್ಲ. ಸದ್ರಿ ಪೊಟೊಗಳಲ್ಲಿ ನನ್ನ ಪ್ರಕಾರ ಕಚೆರಿಯಲ್ಲಿ ಅಂದಾಜು ಎಷ್ಟು ಗಂಟೆಗೆ ತೆಗೆದಿರುತ್ತಾರೆ ಎಂದರೆ ನನಗೆ 5 ವರ್ಷವಾಗಿರುವುದರಿಂದ ಅದರ ಬಗ್ಗೆ ನೆನಪಿಗೆ ಬರುತ್ತಿಲ್ಲ . ಸಾಕ್ಷಿ ಪುನಃ ಬೆಳಿಗ್ಗೆ 11–00 ರಿಂದ 12–00 ಅವಧಿಯಲ್ಲಿ ತೆಗೆದಿರಬಹುದು. ಸಾಮಾನ್ಯವಾಗಿ ಅರಣ್ಯದಲ್ಲಿರುವ ಮರಗಳು ಹಾಗೂ ಪ್ರಾಣಿಗಳು ನಿಮ್ಮ ನಿಗಾದಲ್ಲಿ ಇರುತ್ತದೆ ಎಂದರೆ ಸರಿ. ನಿಮ್ಮ ಕಾರ್ಯ ವ್ಯಾಪ್ತಿಯ ಪ್ರದೇಶದಲ್ಲಿ ಕಾಡು ಕುರಿಗಳು ಇರುತ್ತವಾ ಎಂದರೆ ನಮ್ಮ ಚಾರ್ಜ ದಲ್ಲಿ ಯಾವ ಯಾವ ಪ್ರಾಣಿಗಳು ಇರುತ್ತವೆ ಎಂದು ಇರಲಿಲ್ಲ ಕಚೇರಿಯಲ್ಲಿ ಇರಬಹುದು. ನನ್ನ ಕಾರ್ಯ ವ್ಯಾಪ್ತಿಯಲ್ಲಿ ಚಿಕನ್ ಮತ್ತು ಮಟನ್ ಶಾಪ ಗಳು ಇರುತ್ತವೆ. ಅದೇ ರೀತಿ ಚಿಕನ ಹಾಗೂ ಮಟನ ತಿನ್ನುವ ಜನರು ಸಹ ಇರುತ್ತಾರೆ ಎಂದರೆ ಸರಿ . ಮಹಜರದಲ್ಲಿ ಇರುವಂತೆ 5.2 ಕೆಜಿ ಎಂದು ಹೇಗೆ ಅದನ್ನು ಬರೆದಿರುತ್ತೀರಿ ಎಂದು ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಪೈಲನ್ನು ಕೊಟ್ಟು ಅದರ ನಿಖರವಾದ ತೂಕವನ್ನು ಹೇಳಲು ಬರುತ್ತದಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ .ಹಾಗಾದರೆ ಮಹಜರ ದಲ್ಲಿ ಬರೆದಿರುವ ತೂಕವು ನಿಮ್ಮ ಅಂದಾಜಿನಲ್ಲಿ ನಿವೇ ಊಹಿಸಿಕೊಂಡು ಬರೆದಿರುತ್ತೀರಿ ಎಂದರೆ ಸರಿಯಲ್ಲ. ಆ ರೀತಿ ಪ್ರಕರಣವನ್ನು ಮಾಡಬೇಕು ಎಂದು ಸೃಷ್ಟಿಸಿಕೊಂಡು ಬರೆದಿರುತ್ತೀರಿ ಎಂದರೆ ಸರಿಯಲ್ಲ. ಸದ್ರಿ ಮಹಜರದಲ್ಲಿ 5.2 ಕೆಜಿ ಎಂದು ಬರೆಯಬೇಕಾದರೆ ಅದನ್ನು ನಿಖರವಾಗಿ ತೂಕ ಮಾಡಿ ಬರೆಯಬೇಕಾಗುತ್ತದೆ ಎಂದರೆ ಸರಿ .

ತೂಕ ಮಾಡುವಂತಹ ಅಂಗಡಿಗಳು ಸುಂಕಸಾಳದ ರಸ್ತೆಯ ಎರಡು ಬದಿಗಳಲ್ಲೂ ಇರುತ್ತವೆ ಎಂದರೆ ಸರಿ . ನನ್ನ ಪ್ರಕಾರ ನಾನು ನಮ್ಮ ಕಚೇರಿಗೆ ಬೆಳಿಗ್ಗೆ 10–00 ಗಂಟೆಗೆ ಬಂದಿರುತ್ತೇನೆ. ಮಾಸ್ತಿಕಟ್ಟಾದಿಂದ ಸುಂಕಸಾಳ ಅಂದಾಜು 15 ಕಿ.ಮೀ ದೂರವಾಗುತ್ತದೆ. ನನ್ನ ಪ್ರಕಾರ ಆ ದಿನ ಅಮಾನತ್ತು ಪಡಿಸಿಕೊಳ್ಳಲಾಗಿದೆ ಎನ್ನಲಾದ ವಾಹನವನ್ನು ಕಚೇರಿಗೆ ಯಾರು ತೆಗೆದುಕೊಂಡು ಹೋದರು ಎಂದು ನನಗೆ ನೆನಪಿಲ್ಲ. ಆ ದಿನ ನನ್ನ ಜೊತೆ ನನ್ನ ಮೇಲಾಧಿಕಾರಿಯಾದ ಪವಾರ ರವರ ಬಳಿಯಲ್ಲಿ ಎನರೊಯಡ ಮೊಬೈಲ ಇರುತ್ತದೆ. ನೀವು ಸ್ಥಳದಲ್ಲಿರುವ ಇರುವ ನೈಜತೆಯ ಬಗೆಗ ಸ್ಥಳದಲ್ಲಿ ಪೊಟೊವನ್ನು ತೆಗೆಯಬಹುದು ಎಂದರೆ ಸರಿ . ನ್ಯಾಯಾಲಯದ ಮುಂದೆ ಕಳೆದ ಸಲ ಹಾಜರು ಪಡಿಸಿದ ಪೊಟೊ ಗಳು ನಿಮ್ಮ ಕಚ್ೇರಿಯಲ್ಲಿ ಅದನ್ನು ಸೃಷ್ಟಿ ಮಾಡಿಕೊಂಡು ಹಾಜರು ಪಡಿಸಿದ ಪೊಟೊ ಗಳಾಗಿರುತ್ತದೆ ಎಂದರೆ ಸರಿಯಲ್ಲ. ವಾಹನವನ್ನು ಹೊರತು ಪಡಿಸಿ ಉಳಿದ ಎಲ್ಲಾ ಸಾಕ್ಷ್ಯವನ್ನು ನೀವು ಮತ್ತು ನಿಮ್ಮ ಇಲಾಖಾ ಸಿಬ್ಬಂದಿಗಳು ಸೇರಿಕೊಂಡು ಸೃಷ್ಟಿ ಮಾಡಿಕೊಂಡ ಸಾಕ್ಯೆ ವಾಗಿರುತ್ತದೆ ಎಂದರೆ ಸರಿಯಲ್ಲ. ನಾರಾಯಣ ಶೇಟ ರವರ ಕುಟುಂಬಕ್ಕೂ ಹಾಗೂ ನಿಮ್ಮ ಇಲಾಖೆಗೆ ಸರಿಯಾದ ಸಂಬಂದ ಇಲ್ಲದೆ ಇರುವ ಕಾರಣ ಸದ್ರಿ ಮಹಜರವನ್ನು ಸೃಷ್ಟಿ ಮಾಡಿ ಸುಳ್ಳು ಕೇಸ ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಮಾಂಸವನ್ನು ಸಹ ನೀವು ಸೃಷ್ಟಿ ಮಾಡಿ ಆರೋಪಿತರ ಮೇಲೆ ಸುಳ್ಳು ಕೇಸ್ ವನ್ನು ಹಾಕಲಾಗಿರುತ್ತದೆ ಎಂದರೆ ಸರಿಯಲ್ಲ . ವಾಹನವನ್ನು ಹೊರತು ಪಡಿಸಿ ಆರೋಪಿಗಳಿಗೆ ಜಪ್ತು ಪಡಿಸಿದ ಮಾಲುಗಳಿಗೆ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನೀವು ಹಾಜರು ಪಡಿಸಿದ ಪೊಟೊಗಳನ್ನು ನಿಪಿ–6 ರ ಪೊಟೊಗಳು ಇರುವ ಪೊಟೊ ಕಾರು ಸೀಟಿನ ಪೊಟೊ ವಾಗಿದ್ದು ಅದರಲ್ಲಿ ನೀವು ಅಮಾನತ್ತು ಪಡಿಸಿಕೊಂಡೆವು ಎಂದು ಹೇಳಲಾದ ನಿಪಿ–3 ರಲ್ಲಿ ಕಾಣಿಸಿದಂತಹ ಯಾವುದೇ ವಸ್ತು ಗಳು ನಿಪಿ–6 ರಲ್ಲಿ ಕಾಣಿಸುವುದಿಲ್ಲ ಎಂದರೆ ಸರಿ . ನಿಪಿ–5 ರಲ್ಲಿ ಕಾಣಿಸುವ ಚೀಲವು ನೀವು ಇಟ್ಟುಕೊಂಡು ಹೊಡೆಸಿಕೊಡ ಪೊಟೊ ವಾಗಿರುತ್ತದೆ ಎಂದರೆ ಸರಿಯಲ್ಲ. ಈ ಆರೋಪಿತರ ವಿರುದ ಪ್ರಕರಣವನ್ನು ಮಾಡಲೇ ಬೇಕೆಂಬ ದುರುದ್ದೇಶ ಇಟ್ಟು ಕೊಂಡು ಈ ಪ್ರಕರಣವನ್ನು ಆರೋಪಿತರ ವಿರುದ್ಧ ಮಾಡಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ನೀವು ಹಾಜರು ಪಡಿಸಿದ ಈ ಎಲ್ಲಾ ದಾಖಲೆಗೂ ಮತ್ತು ಮುದ್ದೆಮಾಲಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನೀವು ಮುಖ್ಯ ವಿಚಾರಣೆಯಲ್ಲಿ

ಹೇಳಿದಂತೆ ನೀವು ಸ್ಥಳಕ್ಕೆ ಹೋದಾಗ  ಒಂದು ವಾಹನ ಕಂಡು ಬಂದಿತು. ಆ ವಾಹನವನ್ನು ಪರಿಶೀಲನೆ ಮಾಡಿದಾಗ  ಮಾಂಸ , ಅದಕ್ಕೆ ಅಂಟಿ ಕೊಂಡ ಕಾಡು ಜಾತಿಯ ಎಲೆ , ಕಾಡು ಪ್ರಾಣಿಯ ಕೂದಲು ಹಾಗೂ ರಕ್ತ ದ ಕಲೆಗಳು ಕಂಡು ಬಂದವು  ಎಂದು ಹೇಳಿದ ವಿಚಾರವು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಕಾಡುಜಾತಿಯ  ಎಲೆ  ಎಂದರೆ  ಯಾವ ಕಾಡು ಮರಕ್ಕೆ ಸಂಬಂಧಿಸಿದ ಎಲೆ ಆಗಿರುತ್ತದೆ ಎಂದರೆ  ನನಗೆ ಗೊತ್ತಿಲ್ಲ. ಆ ಕಾಡು ಜಾತಿಯ ಎಲೆಯನ್ನು ನಾನು ಜಪ್ತು ಪಡಿಸಿಕೊಂಡಿಲ್ಲ . ಸದ್ರಿ ಪ್ರಕರಣವನ್ನು ಸೃಷ್ಟಿ ಮಾಡಬೇಕು ಎಂಬ ಉದ್ದೇಶದಿಂದ ನೀವು ಈ ಪ್ರಕರಣದಲ್ಲಿ  ನಿಮ್ಮ ಇಲಾಖೆಯ ದಿನಗೂಲಿ ನೌಕರರರನ್ನು ಸಾಕ್ಷಿದಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.  ಅದೇ ರೀತಿ ನೀವು ಸ್ಥಳಕ್ಕೆ ಹೋಗಿರಿ ಎಂದು ಹೇಳಿದಂತೆ ಮತ್ತು ನಾರಾಯಣ ಶೇಟ ರವರ ಮನೆಯಿಂದ ಆರೋಪಿಗಳು ಊಟ ವಮಾಡಿಕೊಂಡು ಬರುತ್ತಿದ್ದರು ಹಾಗೂ ನಾವು ಅವರನ್ನು  ಅಟಕಾಯಿಸಿ ಬಂದೆವು ಎಂದು ನಾನು ಸುಳ್ಳಿನಿಂದ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.   ಸದ್ರಿ ಪಂಚನಾಮೆಯನ್ನು ಮಾಸ್ತಿಕಟ್ಟಾದಲ್ಲಿ ಬೆಳಿಗೆ 11-00 ಗಂಟೆಯವರೆಗೆ ಇದ್ದು ಮುಗಿಸಿರುತ್ತೇನೆ . ಅದನ್ನು ನಾನು ಸೃಷ್ಟಿಸಿ ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಆರೋಪಿತರಿಗೂ ಈ ಪ್ರಕರಣಕ್ಕೂ ಮುದ್ದೆಮಾಲುಗಳಿಗೂ ಯಾವುದೇ ಸಂಬಂದ ಇಲ್ಲ  ಎಂದರೆ ಸ ರಿಯಲ್ಲ . ಈ ಪ್ರರಕಣವನ್ನು ಆರೋಪಿತರ ಮೇಲೆ ದ್ವೇಷದಿಂದ ಹಾಗೂ ದುರುದ್ದೇಶದಿಂದ ಸುಳ್ಳಾಗಿ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು  ಮಾಡಿಸಲಾಯಿತು)

ಓ  ಹೇ ಕೆ ಸರಿ ಇದೆ.

ಹಿರಿಯ  ಸಿವಿಲ್  ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.